All India Radio: Bangalore

National Bulletin In Kannada

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

16.06.2025 1.10 pm

<><*<><>*><>

ಮುಖ್ಯಾಂಶಗಳು

- ಜನಗಣತಿ ನಡೆಸಲು ಕೇಂದ್ರ ಸರ್ಕಾರದಿಂದ ಅಧಿಕೃತ ಅಧಿಸೂಚನೆ ಪ್ರಕಟ : ೨ ಹಂತಗಳಲ್ಲಿ ಗಣತಿ ಕಾರ್ಯ
- ಪ್ರಧಾನಿ ನರೇಂದ್ರ ಮೋದಿ ಸೈಪ್ರಸ್ ಅಧ್ಯಕ್ಷರೊಂದಿಗೆ ದ್ವಿಪಕ್ಷೀಯ ಮಾತುಕತೆ : ಆರ್ಥಿಕ ಸಹಕಾರ ಬಲವರ್ಧನೆಗೆ ಒತ್ತು
- ಅಹಮದಾಬಾದ್ ವಿಮಾನ ದುರಂತ : ನವದೆಹಲಿಯಲ್ಲಿಂದು ಉನ್ನತಮಟ್ಟದ ಸಮಿತಿಯ ಮೊದಲ ಸಭೆ
- ಅಂತಾರಾಷ್ಟ್ರೀಯ ಯೋಗ ದಿನಾಚರಣೆಗೆ ದಿನ ಗಣನೆ ; ಆಯುಷ್ ಸಚಿವಾಲಯದಿಂದ ವಿಶಾಖಪಟ್ಟಣದಲ್ಲಿ ಸ್ಥಳ ಪರಿಶೀಲನೆ

><><><><><><><><><

ಜನಗಣತಿ ನಡೆಸಲು ಕೇಂದ್ರ ಸರ್ಕಾರ ಇಂದು ಅಧಿಕೃತ ಅಧಿಸೂಚನೆ ಹೊರಿಡಿಸಿದೆ. ಜನಗಣತಿಯೊಂದಿಗೆ ಇದೇ ಮೊದಲ ಬಾರಿಗೆ ಜಾತಿ ಗಣತಿ ನಡೆಸಲಾಗುತ್ತಿದೆ. ಈ ಬಾರಿ ದೇಶದಲ್ಲಿ ಜನಗಣತಿಯನ್ನು ಎರಡು ಹಂತಗಳಲ್ಲಿ ನಡೆಸಲಾಗುವುದು. ಕೇಂದ್ರಾಳಿತ ಪ್ರದೇಶ ಲಡಾಖ್ ಮತ್ತು ಜಮ್ಮು ಮತ್ತು ಕಾಶ್ಮೀರ ಹಾಗೂ ಹಿಮಾಚಲ ಪ್ರದೇಶ ಮತ್ತು ಉತ್ತರಾಖಂಡ ಹೊರತುಪಡಿಸಿ ಉಳಿದೆಲ್ಲ ರಾಜ್ಯಗಳಿಗೆ ೨೦೨೭ರ ಮಾರ್ಚ್ ೧ ಅನ್ನು ಜನಗಣತಿ ನಡೆಸಲು ಉಲ್ಲೇಖಿತ ದಿನಾಂಕ ಎಂದು ಗೃಹ ಸಚಿವಾಲಯ ಹೊರಡಿಸಿರುವ ಅಧಿಸೂಚನೆಯಲ್ಲಿ ಸೂಚಿಸಲಾಗಿದೆ. ಜಮ್ಮು-ಕಾಶ್ಮೀರ, ಲಡಾಖ್, ಹಿಮಾಚಲಪ್ರದೇಶ ಮತ್ತು ಉತ್ತರಾಖಂಡದಲ್ಲಿ ೨೦೨೬ ಅಕ್ಟೋಬರ್ ಒಂದರಿಂದಲೇ ಜನಗಣತಿ ನಡೆಸಲು ಯೋಜಿಸಲಾಗಿದೆ. ಇದು ರಾಷ್ಟ್ರೀಯ ಜನಗಣತಿಯ ೧೬ನೇ ಆವೃತ್ತಿಯಾಗಿದ್ದು, ಸ್ವತಂತ್ರ ಭಾರತದ ೮ನೇ ಜನಗಣತಿಯಾಗಿರಲಿದೆ.

**ಈ ಕುರಿತು ಒಂದು ವರದಿ : ಅಭಯ್ (೩೫ ಸೆಕೆಂಡ್‌ಗಳು)**

ಮೊದಲ ಹಂತದಲ್ಲಿ, ಮನೆ ಪಟ್ಟಿ ಕಾರ್ಯಾಚರಣೆ ಕೈಗೊಳ್ಳಲಾಗುವುದು, ಇದರಲ್ಲಿ, ಪ್ರತಿ ಮನೆಯ ಪರಿಸ್ಥಿತಿಗಳು, ಆಸ್ತಿಗಳು ಮತ್ತು ಸೌಕರ್ಯಗಳನ್ನು ಸಂಗ್ರಹಿಸಲಾಗುತ್ತದೆ. ಎರಡನೇ ಹಂತದಲ್ಲಿ,

ಪ್ರತಿ ಮನೆಯ ಪ್ರತಿಯೊಬ್ಬ ವ್ಯಕ್ತಿಯ, ಸಾಮಾಜಿಕ-ಆರ್ಥಿಕ, ಸಾಂಸ್ಕೃತಿಕ ವಿವರಗಳನ್ನು ಸಂಗ್ರಹಿಸಲಾಗುತ್ತದೆ. ನಂತರದ ಜನಗಣತಿಯನ್ನು, ಮೊಬೈಲ್ ಅಪ್ಲಿಕೇಶನ್‌ಗಳನ್ನು ಬಳಸಿಕೊಂಡು, ಡಿಜಿಟಲ್ ವಿಧಾನಗಳ ಮೂಲಕ ನಡೆಸಲಾಗುತ್ತದೆ. ಅಲ್ಲದೇ, ಸ್ವಯಂ ಎಣಿಕೆಯನ್ನು ಸಹ ಜನರಿಗೆ ಲಭ್ಯವಾಗುವಂತೆ ಮಾಡಲಾಗುತ್ತದೆ. ಸಂಗ್ರಹಣೆಯ ಸಮಯದಲ್ಲಿ ದತ್ತಾಂಶ ಸುರಕ್ಷತೆಯನ್ನು ಖಚಿತಪಡಿಸಿಕೊಳ್ಳಲು, ಅತ್ಯಂತ ಕಠಿಣ ದತ್ತಾಂಶ ಭದ್ರತಾ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಹೇಳಲಾಗಿದೆ.

><><><><><><><><

ಸೈಪ್ರಸ್ ಪ್ರವಾಸದಲ್ಲಿರುವ ಪ್ರಧಾನಿ ನರೇಂದ್ರ ಮೋದಿ, ನಿಕೋಸಿಯಾದಲ್ಲಿಂದು ಸೈಪ್ರಸ್ ಅಧ್ಯಕ್ಷ ನಿಕೋಸ್ ಕ್ರಿಸ್ಟೋ ಡೌವ್‌ಲೈಡ್ಸ್ ಅವರೊಂದಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದರು. ಸಭೆಯಲ್ಲಿ ಉಭಯ ನಾಯಕರು ಶಿಕ್ಷಣ, ಡಿಜಿಟಲ್ ಪಾಲುದಾರಿಕೆ ಮತ್ತು ಪ್ರಾದೇಶಿಕ ಭದ್ರತೆ ಸೇರಿದಂತೆ ವಿವಿಧ ಪರಸ್ಪರ ಹಿತಾಸಕ್ತಿಯ ಪ್ರಾದೇಶಿಕ ಹಾಗೂ ಜಾಗತಿಕ ವಿಷಯಗಳ ಕುರಿತು ಸಮಾಲೋಚನೆ ನಡೆಸಿದರು. ಇದಕ್ಕೂ ಮುನ್ನ ಪ್ರಧಾನಿ ನರೇಂದ್ರ ಮೋದಿಯವರಿಗೆ ನಿಕೋಸಿಯಾದಲ್ಲಿರುವ ಅಧ್ಯಕ್ಷರ ಭವನದಲ್ಲಿ ಸಾಂಪ್ರದಾಯಿಕ ಸ್ವಾಗತ ಕೋರಲಾಯಿತು. ಸಂಜೆ ಪ್ರಧಾನಿ ಹಾಗೂ ಸೈಪ್ರಸ್ ಅಧ್ಯಕ್ಷರು ವಿಶ್ವಸಂಸ್ಥೆ ಕದನ ವಿರಾಮ ರೇಖೆಗೆ ಭೇಟಿ ನೀಡಲಿದ್ದು, ಇದು ಜಾಗತಿಕ ಶಾಂತಿ-ರಕ್ಷಣಾ ಪ್ರಯತ್ನಗಳಿಗೆ ಭಾರತದ ದೀರ್ಘಕಾಲೀನ ಕೊಡುಗೆಯ ಸಂಕೇತವಾಗಿರಲಿದೆ. ಸೈಪ್ರಸ್ ಪ್ರವಾಸವನ್ನು ಸಂಪನ್ನಗೊಳಿಸಿ ಪ್ರಧಾನಿ ಕೆನಡಾ ಪ್ರಧಾನಿ ಮಾರ್ಕ್‌ಕಾರ್ನಿ ಅವರ ಆಹ್ವಾನದ ಮೇರೆಗೆ ಜಿ-೭ ಶೃಂಗಸಭೆಯಲ್ಲಿ ಪಾಲ್ಗೊಳ್ಳಲು ಕೆನಡಾದ ಕನಾನಾಸ್‌ಕಿಸ್‌ಗೆ ಪ್ರಯಾಣ ಬೆಳೆಸಲಿದ್ದಾರೆ. ಜಿ-೭ ಶೃಂಗಸಭೆ ಬಳಿಕ ಪ್ರಧಾನಿ ಕ್ರೋಯೇಷಿಯಾಗೆ ಭೇಟಿ ನೀಡಲಿದ್ದು, ಅಧ್ಯಕ್ಷ ಜ್ವರಾನ್ ಮಿಲಾನೋವಿಕ್ ಮತ್ತು ಪ್ರಧಾನಿ ಆಂಡ್ರೆಜ್ ಪ್ಲೆಂಕೋವಿಕ್ ಅವರೊಂದಿಗೆ ಸಭೆಗಳನ್ನು ನಡೆಸಲಿದ್ದಾರೆ.

><><><><><><><><

ಭಾರತ ಮತ್ತು ಸೈಪ್ರಸ್ ನಡುವಿನ ಆರ್ಥಿಕ ಸಹಕಾರ ಬಲವರ್ಧನೆಗೆ ಭಾರತ ಬದ್ಧವಾಗಿದೆ ಎಂದು ಪ್ರಧಾನಮಂತ್ರಿ ನರೇಂದ್ರ ಮೋದಿ ತಿಳಿಸಿದ್ದಾರೆ. ಸೈಪ್ರಸ್‌ನ ಲಿಮಾಸೋಲ್‌ನಲ್ಲಿ ನಡೆದ ವ್ಯಾಪಾರ ದುಂಡುಮೇಜಿನ ಸಭೆಯಲ್ಲಿ ಮಾತನಾಡಿದ ಪ್ರಧಾನಿ, ಸೈಪ್ರಸ್ ಭಾರತದ ವಿಶ್ವಾಸಾರ್ಹ ಪಾಲುದಾರ ಎಂದು ಶ್ಲಾಘಿಸಿರುವ ಪ್ರಧಾನಮಂತ್ರಿ, ಭಾರತದಲ್ಲಿ ಸೈಪ್ರಸ್‌ನಿಂದ ಹಲವಾರು ಪ್ರಮುಖ ಹೂಡಿಕೆಗಳಾಗಿವೆ. ಹಲವಾರು ಭಾರತೀಯ ಕಂಪನಿಗಳು ಸೈಪ್ರಸ್ ಅನ್ನು ಯುರೋಪ್ ಪ್ರವೇಶಿಸಲು ಸುಲಭ ಮಾರ್ಗವೆಂದು ಪರಿಗಣಿಸುತ್ತವೆ. ಪ್ರಸ್ತುತ ಭಾರತ-ಸೈಪ್ರಸ್ ದ್ವಿಪಕ್ಷೀಯ

ವ್ಯಾಪಾರ ೧೫೦ ಮಿಲಿಯನ್ ಡಾಲರ್‌ಗಳಷ್ಟಿದ್ದರೂ, ಅದರ ವಾಸ್ತವಿಕ ಶಕ್ತಿ ಹಲವು ಪಟ್ಟು ಹೆಚ್ಚಿದೆ ಎಂದು ಮಾಹಿತಿ ನೀಡಿದರು.

**ಧ್ವನಿ : ಪ್ರಧಾನಮಂತ್ರಿ ನರೇಂದ್ರ ಮೋದಿ (೨೦ ಸೆಕೆಂಡ್ಸ್)**

><><><><><><><><><

ಅಹಮದಾಬಾದ್ ವಿಮಾನ ದುರಂತದ ತನಿಖೆ ನಡೆಸುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರ ರಚಿಸಿರುವ ಉನ್ನತ ಮಟ್ಟದ ಸಮಿತಿಯ ಮೊದಲನೇ ಸಭೆ ನವದೆಹಲಿಯಲ್ಲಿಂದು ನಡೆಯಲಿದೆ. ಕೇಂದ್ರ ಗೃಹ ಕಾರ್ಯದರ್ಶಿ ಈ ಸಮಿತಿಯ ನೇತೃತ್ವ ವಹಿಸಲಿದ್ದು, ನಾಗರಿಕ ವಿಮಾನಯಾನ ಸಚಿವಾಲಯ ಕಾರ್ಯದರ್ಶಿ, ಗೃಹ ಸಚಿವಾಲಯದಿಂದ ಹಿರಿಯ ಅಧಿಕಾರಿಗಳು, ಗುಜರಾತ್ ಗೃಹ ಇಲಾಖೆ ಮತ್ತು ರಾಜ್ಯ ವಿಪತ್ತು ಪ್ರತಿಕ್ರಿಯಾ ಪ್ರಾಧಿಕಾರದ ಅಧಿಕಾರಿಗಳು, ಅಹಮದಾಬಾದ್ ಪೊಲೀಸ್ ಆಯುಕ್ತ, ನಾಗರಿಕ ವಿಮಾಯಾನ ಭದ್ರತಾ ಸಂಸ್ಥೆಯ ಮಹಾ ನಿರ್ದೇಶಕರು, ಭಾರತೀಯ ವಾಯುಪಡೆಯ ಪರಿಶೀಲನೆ ಮತ್ತು ಸುರಕ್ಷತಾ ವಿಭಾಗದ ಮಹಾ ನಿರ್ದೇಶಕ ಸಮಿತಿಯ ಸದಸ್ಯರಾಗಿದ್ದಾರೆ. ಸಮಿತಿ ಮೂರು ತಿಂಗಳೊಳಗಾಗಿ ತನ್ನ ವರದಿ ಸಲ್ಲಿಸಲಿದೆ. ಭವಿಷದ್ಯದಲ್ಲಿ ಇಂತಹ ದುರ್ಘಟನೆಗಳು ಮರುಕಳುಹಿಸದಂತೆ ಖಾತರಿಪಡಿಸಲು ನಿಯಮಗಳನ್ನು ರೂಪಿಸುವ ಕುರಿತು ಸಮಿತಿ ಕೇಂದ್ರೀಕರಿಸಲಿದೆ. ಸಮಿತಿಯ ಜೊತೆಗೆ ವಿಮಾನ ಅಪಘಾತ ತನಿಖಾ ಸಂಸ್ಥೆ - ಎಎಐಬಿ ಅಪಘಾತಕ್ಕೆ ಸಂಬಂಧಪಟ್ಟ ತಾಂತ್ರಿಕ ಕಾರಣಗಳ ಕುರಿತು ಒಂದು ಪ್ರತ್ಯೇಕ ತನಿಖೆಯನ್ನು ಮುಂದುವರೆಸಿದೆ.

><><><><><><><><><

ಇದೇ ೨೧ರಂದು ಆಚರಿಸಲಾಗುವ ೧೧ನೇ ಅಂತಾರಾಷ್ಟ್ರೀಯ ಯೋಗದಿನಾಚರಣೆಯ ಪೂರ್ವಸಿದ್ಧತಾ ಕಾರ್ಯಗಳು ಭರದಿಂದ ಸಾಗಿವೆ. ಇದರ ಭಾಗವಾಗಿ ಆಯುಷ್ ಸಚಿವಾಲಯದ ಮತ್ತು ಆಂಧ್ರಪ್ರದೇಶ ಸರ್ಕಾರದ ಅಧಿಕಾರಿಗಳು ವಿಶಾಖಪಟ್ಟಣದಲ್ಲಿ ನಡೆಯಲಿರುವ ಯೋಗ ದಿನಾಚರಣೆಯ ಪ್ರಧಾನ ಸಮಾರಂಭದ ಸ್ಥಳ ಪರಿಶೀಲನೆ ನಡೆಸಿದರು. ಆಯುಷ್ ಕಾರ್ಯದರ್ಶಿ ವೈದ್ಯ ರಾಜೇಶ್ ಕೊಟೇಚ ಮತ್ತು ಆಂಧ್ರಪ್ರದೇಶ ವಿಶೇಷ ಮುಖ್ಯ ಕಾರ್ಯದರ್ಶಿ ಕೆ. ವಿಜಯಾನಂದ್ ಈ ಪರಿಶೀಲನೆ ನೇತೃತ್ವ ವಹಿಸಿದರು. ಈ ನಿಯೋಗ ಯೋಗ ದಿನದಂದು ವಿಶೇಷ ಯೋಗ ಪ್ರದರ್ಶನಗಳು ಮತ್ತು ಸಂಬಂಧಿತ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿರುವ ಆರ್.ಕೆ. ಬೀಚ್, ರಿಶಿಕೊಂಡ ಬೀಚ್, ಆಂಧ್ರ ವಿಶ್ವವಿದ್ಯಾಲಯ ಮತ್ತು ಗೀತಂ ವಿಶ್ವವಿದ್ಯಾಲಯಕ್ಕೆ ಭೇಟಿ ನೀಡಿದರು. ಈ ವೇಳೆ ಅಧಿಕಾರಿಗಳು ಅಂತರ್ ಇಲಾಖೆ ಸಹಕಾರ, ಸಾರ್ವಜನಿಕ ನಿರ್ವಹಣೆ, ಮೂಲಸೌಕರ್ಯ ಸನ್ನದ್ಧತೆ ಮತ್ತು ಸುರಕ್ಷಾ ಮಾರ್ಗಸೂಚಿಗಳ ಕುರಿತು ವಿಸ್ತೃತ ಮಾತುಕತೆ ನಡೆಸಿದರು. ಆಂಧ್ರಪ್ರದೇಶ ಒಂದು ಲಕ್ಷ ಸ್ಥಳಗಳಲ್ಲಿ ಅಂತಾರಾಷ್ಟ್ರೀಯ

ಯೋಗದಿನಾಚರಣೆಯ ಕಾರ್ಯಕ್ರಮಗಳು ಆಯೋಜಿಸಲು ಯೋಜನೆ ರೂಪಿಸಲಾಗಿದ್ದು, ಪ್ರದಾನ ಸಮಾರಂಭ ನಡೆಯುವ ವಿಶಾಖಪಟ್ಟಣಂನಲ್ಲೇ ೫ ಲಕ್ಷ ಯೋಗಪಟುಗಳು ಭಾಗವಹಿಸುವ ನಿರೀಕ್ಷೆಯಿದೆ. ಈ ಎಲ್ಲ ಕ್ರಮಗಳು ಯೋಗಾಂಧ್ರ ಉಪಕ್ರಮದ ಭಾಗವಾಗಿ ಜರುಗಲಿವೆ.

><><><><><><><><><

ಸಂಘರ್ಷವನ್ನು ಸಂವಾದ ಮತ್ತು ರಾಜತಾಂತ್ರಿಕ ಮಾರ್ಗಗಳ ಮೂಲಕ ಬಗೆಹರಿಸುವ ಅಂತಾರಾಷ್ಟ್ರೀಯ ಸಮುದಾಯದ ಕೂಗಿನ ನಡುವೆ ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷ ೪ನೇ ದಿನಕ್ಕೆ ಕಾಲಿಟ್ಟಿದೆ. ಇಂದು ಬೆಳಗ್ಗೆ ಇರಾನ್ ನಡೆಸಿದ ದಾಳಿಗಳು ಇಸ್ರೇಲ್‌ನ ತೈಲ ಸಂಸ್ಕರಣಾ ಘಟಕಗಳು ಹಾಗೂ ವಿದ್ಯುತ್ ಗ್ರಿಡ್‌ಗಳಿಗೆ ಹಾನಿ ಮಾಡಿದೆ. ಇಸ್ರೇಲ್‌ನ ಯುದ್ಧ ವಿಮಾನಗಳು ಇರಾನ್ ಕ್ರಾಂತಿಕಾರಿ ರಕ್ಷಣಾ  ಪಡೆ - ಐಆರ್‌ಜಿಯ ರಹಸ್ಯ ವಿಭಾಗವಾದ ಕುಡ್ಸ್ ಫೋರ್ಸ್‌ನ ನಿಯಂತ್ರಣಾ ಕೇಂದ್ರಗಳ ಮೇಲೆ ದಾಳಿ ನಡೆಸಿದೆ ಎಂದು ಇಸ್ರೇಲ್ ರಕ್ಷಣಾಪಡೆ ಹೇಳಿಕೊಂಡಿದೆ. ದಾಳಿ ಪ್ರತಿ ದಾಳಿಯ ನಡುವೆ ಎರಡೂ ಕಡೆಗಳಲ್ಲಿ ಸಾವು-ನೋವಿನ ಪ್ರಮಾಣ ಹೆಚ್ಚಾಗುತ್ತಿದ್ದು, ಇಸ್ರೇಲ್‌ನಲ್ಲಿ ಒಟ್ಟು ಮೃತಪಟ್ಟವರ ಸಂಖ್ಯೆ ೨೦ಕ್ಕೇರಿದ್ದು, ೩೮೦ಕ್ಕೂ ಹೆಚ್ಚು ಜನರು ಗಾಯಗೊಂಡಿದ್ದಾರೆ. ಇನ್ನೊಂದೆಡೆ ಇಸ್ರೇಲ್ ದಾಳಿಗೆ ಇರಾನ್‌ನಲ್ಲಿ ಕನಿಷ್ಠ ೨೨೪ ಮಂದಿನ ಸಾವಿನ ವರದಿಯಾಗಿದ್ದು, ೧ ಸಾವಿರದ ೨೦೦ಕ್ಕೂ ಅಧಿಕ ಜನರಿಗೆ ಗಾಯಗಳಾಗಿವೆ. ಕೆಲವು ಮಾಧ್ಯಮ ವರದಿಗಳು ಇರಾನ್ ಕತಾರ್ ಹಾಗೂ ಒಮನ್ ರಾಷ್ಟ್ರಗಳನ್ನು ಸಂಪರ್ಕಿಸಿದ್ದು, ಕದನ ವಿರಾಮ ಮಾತುಕತೆಗಳಿಗೆ ಸಂಬಂಧಿಸಿದಂತೆ ಅಮೆರಿಕದೊಂದಿಗೆ ಮಧ್ಯಸ್ಥಿಕೆ ವಹಿಸಲು ಕೋರಿರುವ ಕುರಿತು ವರದಿಮಾಡಿವೆ. ಇನ್ನು ಸೌದಿ-ಅರೆಬಿಯಾ ರಾಜತಾಂತ್ರಿಕ ಮಾರ್ಗಗಳ ಮೂಲಕ ಸಂಘರ್ಷ ಪರಿಹರಿಸಲು ಪ್ರಯತ್ನಿಸುತ್ತಿದೆ.

><><><><><><><><><

ವಾರಾಂತ್ಯದಲ್ಲಿ ಇಸ್ರೇಲ್ ಮತ್ತು ಇರಾನ್ ನಡುವಿನ ಸಂಘರ್ಷ ಉಲ್ಬಣಗೊಂಡ ಪರಿಣಾಮ, ಏಷ್ಯಾದ ಇಂದಿನ ಆರಂಭಿಕ ವಹಿವಾಟಿನಲ್ಲಿ ಜಾಗತಿಕ ತೈಲ ಬೆಲೆಗಳು ಏರಿಕೆಯಾಗಿವೆ. ಹೆಚ್ಚಿದ ಸಂಘರ್ಷದ ಉದ್ವಿಗ್ನತೆಗಳಿಂದಾಗಿ, ಮಧ್ಯಪ್ರಾಚ್ಯದಿಂದ ತೈಲ ರಫ್ತಿಗೆ ವ್ಯಾಪಕವಾಗಿ ಅಡ್ಡಿ ಉಂಟಾಗಿದೆ. ಬ್ರೆಂಟ್ ಕಚ್ಚಾ ತೈಲದ ಬೆಲೆ ಶೇಕಡಾ ೨.೩ ರಷ್ಟು ಏರಿಕೆಯಾಗಿ, ಪ್ರತಿ ಬ್ಯಾರೆಲ್‌ಗೆ ೭೫.೯೩ ಡಾಲರ್ ತಲುಪಿದೆ.

><><><><><><><><><

ಬ್ರಿಟನ್ ವಿದೇಶಿ ಗುಪ್ತಚರ ಸಂಸ್ಥೆ - ಎಂ-೧೬ಗೆ ೧೧೬ ವರ್ಷಗಳ ಇತಿಹಾಸದಲ್ಲಿ ಮೊದಲ ಬಾರಿಗೆ ಮಹಿಳೆಯೊಬ್ಬರು ನೇತೃತ್ವ ವಹಿಸಲಿದ್ದಾರೆ. ಬ್ರೆಸ್ ಮೆಟ್ರೆವೆಲಿ ಈ ವರ್ಷಾಂತ್ಯಕ್ಕೆ ೧೮ನೇ

ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಳ್ಳಲಿದ್ದು, ಪ್ರಧಾನಿ ಕೀರ್ ಸ್ಟಾರ್ಮರ್ ಈ ನೇಮಕಾತಿಯನ್ನು ಐತಿಹಾಸಿಕ ಎಂದಿದ್ದಾರೆ.

><><><><><><><><

ದೇಶದ ಪಶ್ಚಿಮ ಕರಾವಳಿಯಲ್ಲಿ ಭಾರೀ ಮಳೆಯಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಎಚ್ಚರಿಕೆ ನೀಡಿದ್ದು, ರೆಡ್ ಅಲರ್ಟ್ ಘೋಷಿಸಿದೆ. ಆಕಾಶವಾಣಿಯೊಂದಿಗೆ ಮಾತನಾಡಿದ ಇಲಾಖೆಯ ಹಿರಿಯ ವಿಜ್ಞಾನಿ ಆರ್‌ಕೆ ಜೆನಮಣಿ, ಮುಂದಿನ ೨ ದಿನಗಳಲ್ಲಿ ದೆಹಲಿ, ಹರಿಯಾಣ, ಪಂಜಾಬ್ ಮತ್ತು ಗುಜರಾತ್‌ನಲ್ಲಿ ಬಿರುಗಾಳಿ ಹಾಗೂ ಮಿಂಚು, ಗುಡುಗು ಸಹಿತ ಮಳೆಯಾಗುವ ನಿರೀಕ್ಷೆಯಿದೆ ಎಂದು ಹೇಳಿದ್ದಾರೆ. ದೆಹಲಿ ಸೇರಿದಂತೆ ವಾಯುವ್ಯ ಭಾರತದಲ್ಲಿ ನಿನ್ನೆ, ಗರಿಷ್ಠ ತಾಪಮಾನದಲ್ಲಿ ತೀವ್ರ ಇಳಿಕೆಯಾಗಿದೆ ಎಂದ ಅವರು, ದೇಶದ ಯಾವುದೇ ಭಾಗದಲ್ಲಿ, ಮುಂಗಾರಿನಲ್ಲಿ ಪ್ರಗತಿ ಕಂಡುಬಂದಿಲ್ಲ ಆದರೆ, ಕೊಂಕಣ, ಗೋವಾ ಮತ್ತು ಕರಾವಳಿ ಕರ್ನಾಟಕದಲ್ಲಿ ಭಾರೀ ಮಳೆಯಾಗುತ್ತಿದೆ ಎಂದು ತಿಳಿಸಿದ್ದಾರೆ. ಹೆಚ್ಚಿನ ಕೇಂದ್ರಗಳಲ್ಲಿ ನಿನ್ನೆ ತಾಪಮಾನ, ೪೦ ಡಿಗ್ರಿ ಸೆಲ್ಸಿಯಸ್‌ಗಿಂತ ಕಡಿಮೆ ಅಥವಾ ಸಾಮಾನ್ಯವಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

><><><><><><><><

ಮುಂಬರುವ ಬಿಲ್ಲುಗಾರಿಕೆ ವಿಶ್ವಕಪ್ ಹಂತ ೪ ಮತ್ತು ವಿಶ್ವ ಚಾಂಪಿಯನ್‌ಶಿಪ್‌ಗಾಗಿ ನಡೆದ ಅರ್ಹತಾ ಸ್ಪರ್ಧೆಯಲ್ಲಿ, ಅನುಭವಿ ಬಿಲ್ಲುಗಾರ ಅಭಿಷೇಕ್ ವರ್ಮಾ ಮತ್ತು ಮೂರು ಬಾರಿ ಒಲಿಂಪಿಯನ್, ಅತನು ದಾಸ್ ಸ್ಥಾನ ಪಡೆಯುವಲ್ಲಿ ವಿಫಲರಾಗಿದ್ದಾರೆ. ಆದರೆ ನಾಲ್ವರು ಆಟಗಾರ್ತಿಯರು ತಮ್ಮ ಸ್ಥಾನಗಳನ್ನು ಭದ್ರಪಡಿಸಿಕೊಂಡಿದ್ದಾರೆ. ಅರ್ಹತಾ ಸುತ್ತಿನಲ್ಲಿ ದೀಪಿಕಾ ಕುಮಾರಿ, ಅಂಕಿತಾ ಭಕತ್ ಗೆಲುವು ಸಾಧಿಸಿದರು. ಮಹಾರಾಷ್ಟ್ರದ ಗಾಥಾ ಖಡಕೆ ಮತ್ತು ಶಾರ್ವರಿ, ನಾಲ್ಕು ಸದಸ್ಯರ ಮಹಿಳಾ ರಿಕರ್ವ್ ತಂಡದಲ್ಲಿ ಸ್ಥಾನ ಪಡೆದರು. ಮ್ಯಾಡ್ರಿಡ್‌ನಲ್ಲಿ ಜುಲೈ ೮ ರಿಂದ ೧೩ ರವರೆಗೆ ನಡೆಯಲಿರುವ ವಿಶ್ವಕಪ್ ಹಂತ ೪ರಲ್ಲಿ, ಈ ನಾಲ್ವರು ಬಿಲ್ಲುಗಾರರು ಭಾಗವಹಿಸಲಿದ್ದಾರೆ.

><><><><><><><><